



ಅರುಣ ಪಿ. ಭಟ್ಟ

## ವಾರಭವಿಷ್ಯ: 16.12.2021ರಿಂದ 22.12.2021ರವರೆಗೆ




ವಾರದ ಶುರುವಿನಲ್ಲಿ ನಿಮ್ಮ ಮುಖದ ಸೌಂದರ್ಯ ಹೆಚ್ಚಾಗಲಿದೆ. ಸಂತೋಷದ ಕಾರಣಕ್ಕೆ ಹೀಗಾಗಬಹುದು. ಹೊಸ ಉತ್ಸಾಹ ನಿಮ್ಮಲ್ಲಿ ಕಾಣಿಸಿಕೊಳ್ಳಲಿದೆ. ವಾರದ ಮಧ್ಯ ಭಾಗದಲ್ಲಿ ಜೀವನ ಮಟ್ಟದ ಸುಧಾರಣೆ ಬಗ್ಗೆ ಹೆಚ್ಚಿನ ಗಮನ ನೀಡಲಿದ್ದೀರಿ. ಆದರೆ ಈ ಅವಧಿಯಲ್ಲಿ ನಿಮಗೆ ನಾನಾ ಬಗೆಯ ಸವಾಲುಗಳು ಎದುರಾಗಲಿವೆ. ಶುಭದಿನ 18. ಹನುಮಾನ್ ಚಾಲೀಸ್ ಪಠಿಸಿರಿ.




ಕೌಟುಂಬಿಕ, ಉದ್ಯೋಗ ಮತ್ತು ಸಂಘಟನೆಗೆ ಸಂಬಂಧಿಸಿದಂತೆ ಉತ್ತಮವಾದ ಪ್ರಗತಿ ಇದೆ. ಉದ್ಯೋಗ ಸ್ಥಳದಲ್ಲಿ ಮೆಚ್ಚುಗೆ ಮಾತುಗಳನ್ನು ಕೇಳಲಿದ್ದೀರಿ. ವೈಯಕ್ತಿಕ ಸಂಬಂಧದಲ್ಲಿ ಸಂಗಾತಿಯನ್ನು ಮೆಚ್ಚಿಸುವ ಸಲುವಾಗಿ ಉಡುಗೊರೆಗಳನ್ನು ನೀಡಲಿದ್ದೀರಿ. ಆದರೆ ನೀವು ಬಹಳ ನಂಬಿದ ವ್ಯಕ್ತಿಗಳು ವಿವಿಧ ವಿಚಾರಗಳಲ್ಲಿ ಸುಳ್ಳು ಹೇಳುವುದು ನಿಮಗೆ ತಿಳಿದು ಬೇಸರವಾಗುತ್ತದೆ. ಶುಭದಿನ 17. ಗಣೇಶ ಪಂಚರತ್ನ ಪಠಿಸಿರಿ.




ವಾರದ ಆರಂಭದಲ್ಲಿ ವೃತ್ತಿ ಬದುಕಿನಲ್ಲಿ ಬೆಳವಣಿಗೆಗೆ ಅದ್ಭುತ ಅವಕಾಶಗಳಿವೆ. ನಿಮ್ಮ ಪರಿಶ್ರಮಕ್ಕೆ ತುಂಬ ವೇಗದಲ್ಲಿ ಪ್ರತಿಫಲ ದೊರೆಯಲಿದೆ. ಇನ್ನು ಹಣಕಾಸು ಪರಿಸ್ಥಿತಿ ಉತ್ತಮಪಡಿಸಿಕೊಳ್ಳುವ ಅವಕಾಶ ನಿಚ್ಚಳವಾಗಿ ಗೋಚರಿಸುತ್ತದೆ. ಎಲೆಕ್ಟ್ರಾನಿಕ್ ವಸ್ತುಗಳನ್ನು ಖರೀದಿಸಲು ಮನಸ್ಸು ಮಾಡುತ್ತೀರಿ. ಕನಸನ್ನು ಸಾಕಾರ ಮಾಡಿಕೊಳ್ಳಲು ಪ್ರಯತ್ನಿಸುತ್ತೀರಿ. ಶುಭದಿನ 18. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ಉದ್ಯೋಗಸ್ಥರಿಗೆ ವಾರದ ಶುರುವಿನಲ್ಲಿ ಅನುಕೂಲವಿದೆ. ಸೇವಾ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಗೆ ಹಾಗೂ ವ್ಯಾಪಾರ ವಲಯದಲ್ಲಿ ತೊಡಗಿರುವವರಿಗೆ ಉತ್ತಮ ಅನುಕೂಲವಿದೆ. ಬಡ್ತಿ ವೇತನ ಹೆಚ್ಚಳ ಆಗುವ ಸಾಧ್ಯತೆ ಇದೆ. ವೈಯಕ್ತಿಕ ಸಂಬಂಧದಲ್ಲಿ ಮನಸಿಗೆ ಬೇಸರವಾಗಲಿದೆ. ಇಂಥ ಸನ್ನಿವೇಶದಲ್ಲಿ ವಾಗ್ವಾದ ಮಾಡದೆ ವಾಸ್ತವವನ್ನು ವಿವರಿಸಿ. ಶುಭದಿನ 19. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಉದ್ಯೋಗ ಸ್ಥಳದಲ್ಲಿ ಪ್ರಗತಿಗಾಗಿ ಭಾರೀ ಶ್ರಮ ಹಾಕಲಿದ್ದೀರಿ. ಒಂದಲ್ಲ ಒಂದು ಕೆಲಸವನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸುವ ಒತ್ತಡ ಇದ್ದೇ ಇರುತ್ತದೆ. ಆದರೆ ಈ ಕೆಲಸಗಳನ್ನು ಪೂರ್ತಿ ಮಾಡಿದರೂ ಗೌರವ ಪ್ರಾಧಾನ್ಯ ಏನೂ ದೊರೆಯುವುದಿಲ್ಲ. ಆದರೆ ನಿಮ್ಮ ಪರಿಶ್ರಮವನ್ನು ಮುಂದುವರಿಸಿದಲ್ಲಿ ಮಾತ್ರ ಭವಿಷ್ಯದಲ್ಲಿ ಅನುಕೂಲ ನಿರೀಕ್ಷಿಸಲು ಸಾಧ್ಯ. ಶುಭದಿನ 20. ಕಾಲಭೈರವನ ಸೇವೆ ಮಾಡಿರಿ.




ಸಾಹಿತ್ಯ ಸಿನಿಮಾ, ಸೈನ್ಯ ಮತ್ತು ಭದ್ರತೆ ಕ್ಷೇತ್ರದಲ್ಲಿ ಇರುವವರಿಗೆ ಅನುಕೂಲ ಇದೆ. ನೀವು ಪಟ್ಟ ಶ್ರಮಕ್ಕೆ ಅದ್ಭುತವಾದ ಅನುಕೂಲಗಳು ದೊರೆಯಲಿವೆ. ಪೋಷಕರ ಜತೆಗೆ ಹೆಚ್ಚು ಸಮಯ ಕಳೆಯಲು ಸಾಧ್ಯವಾಗದೆ ಕೆಲವು ಸಮಸ್ಯೆಗಳು ತಲೆದೋರಲಿವೆ. ವಾರದ ಮಧ್ಯ ಭಾಗದ ತನಕ ಆರೋಗ್ಯ ಉತ್ತಮವಾಗಿರುತ್ತದೆ. ವ್ಯಾಪಾರ ವ್ಯವಹಾರದಲ್ಲಿ ಉತ್ತಮ ಲಾಭ ಇದೆ. ಶುಭದಿನ 19. ಸೌಂದರ್ಯ ಲಹರಿ ಪಠಿಸಿರಿ.




ಮನೆಗೆ ಅಗತ್ಯ ಇರುವ ವಸ್ತುಗಳನ್ನು ಖರೀದಿ ಮಾಡುವ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸುತ್ತೀರಿ. ನೀವು ಹಾಕಿದ ಶ್ರಮಕ್ಕೆ ಯಶಸ್ಸು ಸಿಗಲಿದೆ. ಉದ್ಯೋಗ ವೃತ್ತಿ ಜೀವನದಲ್ಲಿ ನಿರೀಕ್ಷಿತ ಯಶಸ್ಸು ದೊರೆಯಲಿದೆ. ಆ ಮೂಲಕ ನಿಮ್ಮ ಕನಸನ್ನು ಈಡೇರಿಸಿಕೊಳ್ಳಲಿದ್ದೀರಿ. ಇದೇ ಮೊದಲಿಗೆ ಎಂಬಂತೆ ಉದ್ಯೋಗಕ್ಕೆ ಪ್ರಯತ್ನಿಸುತ್ತಿರುವವರು ಹೆಚ್ಚಿನ ಪರಿಶ್ರಮ ಹಾಕಬೇಕಾಗುತ್ತದೆ. ಶುಭದಿನ 18. ಲಿಂಗಾಷ್ಟಕ ಪಠಿಸಿರಿ.




ಹೆಚ್ಚುವರಿ ಆದಾಯ ಮೂಲದಿಂದ ನಿರೀಕ್ಷಿತ ಪ್ರಮಾಣದಲ್ಲಿ ಹಣಕಾಸಿನ ಹರಿವು ಆಗದೆ ಬೇಸರಕ್ಕೆ ಗುರಿಯಾಗುತ್ತೀರಿ. ಈ ವಿಚಾರದಲ್ಲಿ ನಿಮ್ಮ ವಿವೇಚನೆಯನ್ನು ಸರಿಯಾದ ರೀತಿಯಲ್ಲಿ ಬಳಸಿ. ಈ ಅವಧಿಯಲ್ಲಿ ಆದಾಯಕ್ಕಿಂತ ಖರ್ಚು ಹೆಚ್ಚಾಗುತ್ತಿದೆಯಲ್ಲಾ ಎಂಬ ಚಿಂತೆ ಕಾಡುತ್ತದೆ. ಇನ್ನು ಗೆಳೆಯ ಗೆಳತಿಯರ ಜತೆಗೆ ಒತ್ತಡದ ಸನ್ನಿವೇಶವನ್ನು ಎದುರಿಸುತ್ತೀರಿ. ಶುಭದಿನ 20. ಚಂಡಿ ಪಾರಾಯಣ ಮಾಡಿರಿ.




ಶೈಕ್ಷಣಿಕ ರಂಗದಲ್ಲಿ ಅದ್ಭುತವಾದ ಪ್ರಗತಿ ಇದೆ. ಸ್ಪರ್ಧಾತ್ಮಕ ಕ್ಷೇತ್ರದಲ್ಲಿ, ಇಂಟರ್ ವ್ಯೂಗಳಲ್ಲಿ ಯಶಸ್ಸು ನಿಮ್ಮದಾಗಲಿದೆ. ಸಂಗಾತಿ ಜತೆಗೆ ಬಾಂಧವ್ಯ ಇನ್ನಷ್ಟು ಗಟ್ಟಿಯಾಗಲಿದೆ. ಹಣಕಾಸು ವಿಚಾರದಲ್ಲಿ ನಿರೀಕ್ಷಿತವಾದ ಪ್ರಗತಿ ಆಗಲಿದೆ. ಕೆಲವರಿಗೆ ಖರ್ಚಿನಲ್ಲಿ ಅನಿರೀಕ್ಷಿತವಾದ ಹೆಚ್ಚಳ ಆಗಬಹುದು. ಹೀಗೆ ಆಗುವುದರಿಂದ ಸಮಸ್ಯೆಗಳು ಎದುರಾಗಲಿದೆ. ಶುಭದಿನ 19. ದತ್ತ ಗುರುಚರಿತ್ರೆ ಪಠಿಸಿರಿ.




ಉದ್ಯೋಗ ಬದಲಾವಣೆ ಪ್ರಯತ್ನದಲ್ಲಿ ಯಶಸ್ಸು ದೊರೆಯುವ ಉತ್ತಮ ಅವಕಾಶಗಳಿವೆ. ನಿಮಗೆ ಈಗಿರುವ ಗ್ರಹಗತಿಗಳನ್ನು ಗಮನಿಸಿದರೆ ಸಂಸ್ಥೆಯೊಂದರ ಜತೆಗೆ ದೀರ್ಘಾವಧಿ ಒಪ್ಪಂದಕ್ಕೆ ಬರುವ ಸಾಧ್ಯತೆಗಳಿವೆ. ಇನ್ನು ವ್ಯಾಪಾರ ಉದ್ಯಮವನ್ನು ವಿಸ್ತರಿಸಲು ವಿಶಿಷ್ಟ ಅವಕಾಶಗಳು ದೊರೆಯಬಹುದು. ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ಉತ್ತಮವಾದ ಪ್ರಗತಿ ಇದೆ. ಶುಭದಿನ 19. ನವಗ್ರಹ ಆರಾಧನೆ ಮಾಡಿರಿ.




ವಾರದ ಶುರುವಿನಲ್ಲಿ ವರ್ಚಸ್ಸು ವೃದ್ಧಿಯಾಗಲಿದೆ. ಆಯಾ ಉದ್ಯೋಗ ವೃತ್ತಿ ಕ್ಷೇತ್ರದಲ್ಲಿ ಉತ್ತಮ ಪ್ರಗತಿ ಇದೆ. ಸೈನ್ಯ, ಬರವಣಿಗೆ, ಭದ್ರತೆ, ಸಿನಿಮಾ ಅಥವಾ ವೈದ್ಯಕೀಯ ಕ್ಷೇತ್ರದಲ್ಲಿ ಇರುವವರಿಗೆ ಪದೋನ್ನತಿ ದೊರೆಯಬಹುದು. ಇದರಿಂದ ನಿಮ್ಮ ಉತ್ಸಾಹ ಹೆಚ್ಚಾಗಲಿದೆ. ಕೈಗೆತ್ತಿಕೊಂಡ ಕೆಲಸಗಳನ್ನು ಗಡುವಿನೊಳಗೆ ಪೂರ್ಣಗೊಳಿಸಲಿದ್ದೀರಿ. ಶುಭದಿನ 20. ವಿಷ್ಣು ಸಹಸ್ರನಾಮ ಮಾಡಿರಿ.




ವಾರದ ಶುರುವಿನಲ್ಲಿ ಭೂಮಿ ಖರೀದಿ, ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತೊಡಗುವ ಸಾಧ್ಯತೆ ಇದೆ. ಬಹಳ ಕಾಲದಿಂದ ಅಂದುಕೊಂಡು ಬಂದಂಥ ಕೆಲಸಗಳಲ್ಲಿ ಪ್ರಗತಿಯಾಗಲಿದೆ. ಉದ್ಯೋಗ ವಿಚಾರವಾಗಿ ದೂರಪ್ರಯಾಣ ಮಾಡಬೇಕಾಗುತ್ತದೆ. ಇದರಿಂದ ಮಾನಸಿಕವಾಗಿ ಚಿಂತೆಗೆ ಗುರಿಯಾಗುತ್ತೀರಿ. ಈ ಅವಧಿಯಲ್ಲಿ ಆರೋಗ್ಯದಲ್ಲಿ ಸಮಸ್ಯೆ ಎದುರಾಗಬಹುದು. ಶುಭದಿನ 19. ಶ್ರೀರಾಮರಕ್ಷಾ ಸ್ತೋತ್ರ ಪಠಿಸಿರಿ.